★★★

ಟ್ಯಾಕ್ಸಿಯಲ್ಲಿ ಕುಳಿತು ಅರ್ಧದಾರಿ ಹೋಗಿದ್ದಾಗ ಮಗ ಆಫೀಸಿಗೆ ಹೊತ್ತಾಯಿತೆಂದು ಇಳಿದು ಆಟೊ ಹತ್ತಿ ಹೋದ. ಪಾಪ ನನ್ನವರು ಅದೆಷ್ಟು ಆತಂಕದಲ್ಲಿರುವರೋ. ಗೇಟಿನಬಳಿ ಕ್ಷಣಕ್ಷಣಕ್ಕೂ ಕೈಗಡಿಯಾರ ನೋಡುತ್ತಾ ಕಾಯುತ್ತಿರುವರೋ. ನಾ ಒಳ ಹೋದೊಡನೆ ತಲೆ ಸವರಿ ಆರಾಮ ಕುರ್ಚಿಯಲ್ಲಿ ಕುಳ್ಳಿರಿಸಿ ಫ್ಯಾನ್ ಗುಂಡಿಯೊತ್ತಿ ತಣ್ಣನೆ ಪಾನಕ ಕುಡಿಸಿ... "ಇಳೀರೀ ಮೇಡಂ." ಟ್ಯಾಕ್ಸೀ ಚಾಲಕ ಹಗಲುಗನಸಿನಿಂದ ಎಬ್ಬಿಸಿದ. ಮನೆ ಬಾಗಿಲು ಹಾಕಿತ್ತು. ಬೆಲ್ ಒತ್ತಿದೊಡನೆ ಅದಕ್ಕೇ ಕಾಯುತ್ತಿದ್ದರೋ ಎನ್ನುವಂತೆ ನನ್ನವರು ಹೊರ ಹೊರಡಲು ತಯಾರಾಗಿ ಚಪ್ಪಲಿ ಮೆಟ್ಟಿಕೊಂಡೇ ಬಾಗಿಲು ತೆಗೆದರು. "ಸದ್ಯ ಬಂದ್ಯಲ್ಲಾ. ಆಚಾರಿ ಆಗ್ಲೇ ನಾಲ್ಕು ಬಾರಿ ಫೋನ್ ಮಾಡ್ದ. ಎಮ್‌ಟಿಆರ್‌ನಲ್ಲಿ ಕಾಯ್ತಿದ್ದಾನೆ. ನಾ ಹೊರಟೆ" ಎಂದು ಹೊರಟರು.

ನನಗೆ ಹೊಟ್ಟೆಯೇ ಜೀರ್ಣವಾಗಿಬಿಡುವಷ್ಟು ಹಸಿವು. ಕೈಕಾಲು ತೊಳೆದು ತಟ್ಟೆಗೆ ಅನ್ನ ಬಡಿಸಿ ಸಾರು ಸುರಿದುಕೊಂಡೆ. ಹೊರಗೆ ಪುಟ್ಟಿ ಶಾಲೆಯ ವ್ಯಾನಿನ ಹಾರನ್ ಕೇಳಿಸಿತು. ಒಳಬಂದ ಪುಟ್ಟಿ ಓಡಿಬಂದು ತಬ್ಬಿದಳು.

"ಅಜ್ಜಿ, ನಿಂಗಿವತ್ತು ಆಪ್ರೇಶನ್ ಆಯ್ತಾ?"

"ಹೌದು ಪುಟ್ಟಿ, ನೀನಾದ್ರೂ ಕೇಳೀದ್ಯಲ್ಲಾ."

"ನೋವಾಯ್ತಾ?"

"ಎಲ್ಲೋ ಸ್ವಲ್ಪ."

"ಇನ್ಜಕ್ಷನ್ ಕೊಟ್ರಾ?"

"ಒಂದೇ ಒಂದು." ಸಮೀಪ ಬಂದು ನನ್ನ ಕಣ್ಣೊರಸಿದಳು. "ಅಳ್ಬೇಡ ಅಜ್ಜಿ. ನಾನು ದೊಡ್ಡೋಳಾದ್ಮೇಲೆ ಅವ್ರೆಲ್ರಿಗೂ ಇನ್ಜೆಕ್ಷನ್ ಆಪರೇಶನ್ ಎಲ್ಲಾ ಮಾಡ್ತೀನಿ ನೋಡ್ತಿರು" ತನ್ನ ಎಳೇ ಹಲ್ಲನ್ನು ಕಡಿದಳು.

"ಅನ್ನ ಕಲೆಸಿ ಕೊಡ್ತೀನಿ. ಊಟ ಮಾಡ್ತೀಯಾ?"

"ಪಾಪ ನಿಂಗಿವತ್ತು ಆಪರೇಶನ್ ಆಯ್ತಲ್ಲಾ. ಅದಕ್ಕೆ ನೀನೇ ತಿನ್ನು" ಎಂದಳು. ನನಗೇನೋ ಉಪಕಾರ ಮಾಡುವಳಂತೆ! ಇದು ಅವಳು ಪ್ರೀತಿತೋರುವ ಪರಿ! ಅವಳಿಗೆ ಊಟ ತಿನ್ನಿಸಿ ನಾನೂ ಒಂದೆರಡು ತುತ್ತು ತಿಂದು ಹಾಸಿಗೆಯ ಮೇಲೆ ಅಡ್ಡಾದೆ. "ಅಜ್ಜಿ. ಇನ್ಮೇಲೆ ನಾನು ನಿನ್ನಜೊತೇನೇ ಮಲಗ್ತೀನಿ. ಎಲ್ಲಿ ಸರ್ಕೋ" ಎಂದು ನನ್ನ ಹೊದಿಕೆಯೊಳಗೆ ಸೇರಿಕೊಂಡಳು.

"ಒಂದು ಕಥೆ ಹೇಳಜ್ಜಿ." "ಯಾವ ಕಥೆ?" ಆಕಳಿಸುತ್ತಾ ಕೇಳಿದೆ. "ನಿನ್ನ ಆಪರೇಶನ್ ಕಥೆ."

"ಒಂದು ಊರ್ನಲ್ಲಿ ಒಬ್ಳು ಅಜ್ಜಿ ಇದ್ಲಂತೆ. ಅವಳ ಕಣ್ಣಿಗೆ ಪೊರೆ ಬಂತಂತೆ..." ಪುಟ್ಟಿ ಆಗಲೇ ನಿದ್ರೆಗೆ ಜಾರಿದ್ದಳು.


**ಕುಮುದಾ ಪುರುಷೋತ್ತಮ್**

ಹುಟ್ಟೂರು ತುಮಕೂರು. ಸ್ನಾತಕೋತ್ತರ ಪದವೀಧರೆ. ಹಾಸ್ಯ ಲೇಖನಗಳು ಮತ್ತು ಸಣ್ಣಕತೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂರು ಕಥಾ ಸಂಗ್ರಹ, ಮೂರು ಹಾಸ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಆಕಾಶವಾಣಿಯಲ್ಲಿ ನಾಟಕಗಳು, ಗೀತ ರೂಪಕಗಳು ಪ್ರಸಾರಗೊಂಡಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.